ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 08
ಚಾ.ಸಾ.ಸಂಖ್ಯೆಃ 19

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**

**ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ದಿನೇಶ ಜಾವಳಕರ |
| ತಂದೆಯ ಹೆಸರುಃ | ಪಾಂಡುರಂಗ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಪಿ.ಐ. ಧಾರವಾಡ ಎಸ್.ಪಿ. ಕಚೇರಿ |
| ವಾಸಃ | ಧಾರವಾಡ |

**ಸಾಕ್ಷಿಯನ್ನು ದಿಃ 20.12.2025 ರಂದು ವಿಸಿ ಮುಖಾಂತರ ಹಾಜರು ಆಗಿದ್ದು ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**(ಸರ್ಕಾರಿ ಅಭಿಯೋಜಕರು ರಜೆಯ ಮೇಲೆ ಇದ್ದು, ಪ್ರಭಾರಿ ಸರ್ಕಾರಿ ಅಭಿಯೋಜಕರು ಗೈರು ಹಾಜರು ಇದ್ದು, ಸಾಕ್ಷಿದಾರರು ತನಿಖಾಧಿಕಾರಿ ಇದ್ದು, ಸ್ವತಃ ಸಾಕ್ಷ್ಯ ಹೇಳುವ ಸಾಮರ್ಥ್ಯ ಹೊಂದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ತಪ್ಪಿಸುವ ಸಲುವಾಗಿ ಅವರ ಸಾಕ್ಷ್ಯಪಡೆಯಲಾಯಿತು.)**
**ಮುಖ್ಯವಿಚಾರಣೆಃ ಸ್ವತಃ-**

ನಾನು ದಿಃ02.04.2021 ರಿಂದ 21.02.2022 ರವರೆಗೆ ಮುಧೋಳ ಠಾಣೆಯ ಪಿ ಎಸ್ ಐ ಅಂತಾ ಕೆಲಸ ಮಾಡಿದ್ದೇನೆ.

1. ದಿಃ 02.04.2021 ರಂದು ಈ ಪ್ರಕರಣ ಮುಂದಿನ ತನಿಖೆಯನ್ನು ಪಿ.ಎಸ್.ಐ. ಮಾಂಗ ಇವರ ಕಡೆಯಿಂದ ಪಡೆದುಕೊಂಡು ಅದುವರೆಗೆ ಆದ ತನಿಖೆಯನ್ನು ಪರಿಶೀಲಿಸಿದ್ದೇನೆ. ದಿಃ07.04.2021 ರಂದು ಚಾಸಾ-4 ಇವರ ಪುರವಣಿ ಹೇಳಿಕೆ ಪಡೆದೆ. ಅದೇ ದಿವಸ ಚಾಸಾ-4 ಇವರು ನ್ಯಾಯಾಲಯದಲ್ಲಿ ನೀಡಿದ ದಂ.ಪ್ರ.ಸಂ. ಕಲಂ 164 ರಡಿ ಹೇಳಿಕೆಯನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡೆ. (ಅದನ್ನು ನಿಪಿ-13 ಅಂತಾ ಗುರುತಿಸಲಾಯಿತು.)

2. ದಿನಾಂಕಃ 20.04.2021 ರಂದು ಚಾಸಾ-1 ಹಾಗೂ 4 ಇವರ ಗಾಯದ ಪ್ರಮಾಣ ಪತ್ರ ನಿಪಿ-9 ಹಾಗೂ 10 ಇವುಗಳನ್ನು ಚಾಸಾ-17 ಇವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿನಾಂಕಃ 23.06.2021 ರಂದು ಚಾಸಾ-10 ಇವರ ಹೇಳಿಕೆಯನ್ನು ಪಡೆದುಕೊಂಡೆ. ಅವರು ನನ್ನೆದುರಿಗೆ ನಿಪಿ-8 ರಂತೆ ಹೇಳಿಕೆ ನೀಡಿದ್ದಾರೆ. ಅದೇ ದಿವಸ ಚಾಸಾ-17 ಇವರಿಗೆ ಈಗ ನೋಡುತ್ತಿರುವ ಮನವಿಯನ್ನು ನೀಡಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿದ್ದೇನೆ. (ಸದರಿ ಮನವಿಯನ್ನು ನಿಪಿ-14 ಅಂತಾ, ವೈದ್ಯರು ನೀಡಿದ ಹಿಂಬರಹವನ್ನು ನಿಪಿ-14(ಎ) ಅಂತಾ ಗುರುತಿಸಲಾಯಿತು.)

3. ದಿನಾಂಕಃ 07.07.2021 ರಂದು ಚಾಸಾ-16 ಇವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ನೇದ್ದರ ಅಡಿಯಲ್ಲಿಯ ಪ್ರಮಾಣ ಪತ್ರ ನಿಪಿ-3 ಅನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 22.07.2021 ರಂದು ಈ ಪ್ರಕರಣದ ತನಿಖೆಯು ಪೂರ್ಣಗೊಂಡಿದ್ದರಿಂದ ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ 2 ರಿಂದ 4 ಇವರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ**

1. ನಾನು ಪ್ರಕರಣದ ತನಿಖೆಯನ್ನು ನಾನು ವಹಿಸಿಕೊಂಡ ನಂತರ ಚಾಸಾ-1 ಹಾಗೂ 4 ಇವರನ್ನು ಮತ್ತೆ ಆಸ್ಪತ್ರೆಗೆ ಪರೀಕ್ಷೆಗಾಗಿ ಕಳುಹಿಸಿಲ್ಲ. ಚಾಸಾ-4 ಇವರ ಪುರವಣಿ ಹೇಳಿಕೆ ಹಾಗೂ ಗಾಯದ ಪ್ರಮಾಣ ಪತ್ರ ಪಡೆದ ನಂತರವೂ ಸಹ ನಾನು ಚಾಸಾ-4 ಇವರನ್ನು ಆಸ್ಪತ್ರೆಗೆ ಕಳುಹಿಸಿಲ್ಲ. ನಿಪಿ-10 ರಲ್ಲಿ ಚಾಸಾ-4 ಇವರ ಕುತ್ತಿಗೆಯ ಮೇಲೆ ಗಾಯಗಳಾದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ-13 ರ ಮೇಲೆ ನಿಮ್ಮ ಸಹಿ ಇಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು "ಕವಚ ಪತ್ರದ ಮೇಲೆ ಇದೆ" ಅಂತಾ ಹೇಳುತ್ತಾರೆ.

2. ನಿಪಿ-14 ರಂತೆ ಮನವಿ ಮಾಡಲು ನನಗೆ ಯಾವುದೇ ಆಧಾರ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-10 ನನ್ನೆದುರಿಗೆ ನಿಪಿ-8 ರಂತೆ ಹೇಳಿಕೆ ನೀಡಿಲ್ಲ. ಚಾಸಾ-4 ಯಾವುದೇ ಪುರವಣಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿ ನಂ. 2 ಅದೇ ದಿವಸ ಚಾಸಾ-1 ಹಾಗೂ ಆತನ ಸ್ನೇಹಿತನ ಮೇಲೆ ಅಪರಾಧ ಸಂಖ್ಯೆ 37/2021 ಅಂತಾ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. (ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಡಿ-5 ಅಂತಾ ಗುರುತಿಸಲಾಯಿತು.) ಸದರಿ ಪ್ರಕರಣದಲ್ಲಿ ನಾನೇ ತನಿಖೆ ಮಾಡಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿ. (ಸದರಿ ದೋಷಾರೋಪಣೆ ಪಟ್ಟಿಯನ್ನು ನಿಡಿ-6 ಅಂತಾ ಗುರುತಿಸಲಾಯಿತು.)

3. ರಾಜಕೀಯ ಪ್ರಭಾವದಿಂದಾಗಿ ಹಾಗೂ ಚಾಸಾ-1 ಇವರ ಪ್ರಭಾವದಿಂದಾಗಿ ಸರಿಯಾದ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಕೂಡ ಈ ಪ್ರಕರಣದಲ್ಲಿ ಭಾ.ದಂ.ಸಂ.ಕಲಂ 307 ನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 2 ನೀಡಿದ ದೂರಿನ ಪ್ರಕರಣದಲ್ಲಿ ಚಾಕುವಿನಿಂದ ಹೊಡೆತವಿದ್ದು ತೀವ್ರ ಸ್ವರೂಪದ ಗಾಯವಾಗಿದ್ದರೂ ಕೂಡ ಚಾಸಾ-1 ಹಾಗೂ ರಾಜಕೀಯ ಪ್ರಭಾವದಿಂದಾಗಿ ಭಾ.ದಂ.ಸಂ.ಕಲಂ 326 ನ್ನು ಬಿಟ್ಟು ಕೇವಲ 324 ನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತರು ಅಪರಾಧ ಮಾಡಿಲ್ಲದೇ ಇದ್ದರೂ ಕೂಡ ಅವರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**